ಇ) ಬಂದಿದೆ.

ಈ) ಕರ್ನಾಟಕ ರಾಜ್ಯವು ದಿನಾಂಕ: 24.07.2004ರಿಂದ ಆನ್‌ಲೈನ್ ಲಾಟರಿಯನ್ನು ನಿಷೇಧಿಸಿದ್ದು, ಪ್ರಸ್ತುತ ಈ ರಾಜ್ಯದಲ್ಲಿ ಹೊರ ರಾಜ್ಯಗಳಾದ ಸಿಕ್ಕಿಂ ಮತ್ತು ಅರುಣಾಚಲ ಪ್ರದೇಶ ಸರ್ಕಾರಗಳ ಆನ್‌ಲೈನ್ ಲಾಟರಿಗಳು ನಡೆಯುತ್ತಿವೆ. ಕರ್ನಾಟಕ ಉಚ್ಚ ನ್ಯಾಯಾಲಯ ದಿನಾಂಕ: 02.06.2006ರ ತೀರ್ಪಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ರಾಜ್ಯದಲ್ಲಿ ಆನ್‌ಲೈನ್ ಲಾಟರಿ ರದ್ದುಪಡಿಸಿದ್ದ ದಿನಾಂಕ: 24.07.2004ರ ಅಧಿಸೂಚನೆಯನ್ನು ಅನೂರ್ಜಿತಗೊಳಿಸಿದೆ. ಇದರ ವಿರುದ್ಧ ರಾಜ್ಯ ಸರ್ಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ರಜೆ ಅರ್ಜಿ ಸಲ್ಲಿಸಿದೆ. ಪ್ರಸ್ತುತ ರಾಜ್ಯ ಸರ್ಕಾರದ ಪೇಪರ್ ಲಾಟರಿಗಳು ನಡೆಯುವಾಗ್ಗೆ ಕೇವಲ ಆನ್‌ಲೈನ್ ಲಾಟರಿಗಳನ್ನು ರದ್ದುಪಡಿಸಲು ಹೈಕೋರ್ಟ್ ತೀರ್ಪಿನಂತೆ ಅವಕಾಶವಿರುವುದಿಲ್ಲ.

170 (623) : ಶ್ರೀ ಪಾಟೀಲ್ ಎ.ಬಿ. (ಸಂಕೇಶ್ವರ್) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಅರಣ್ಯ ಪ್ರದೇಶದಲ್ಲಿನ ಕಾಡಾನೆಗಳ ಹಾವಳಿ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ಇಲ್ಲಿಯವರೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) 2006–2007ನೇ ಸಾಲಿನಲ್ಲಿ ಕಾಡಾನೆಗಳಿಂದ ತುಳಿತಕ್ಕೆ ಸಿಕ್ಕಿ ಸತ್ತವರ ಸಂಖ್ಯೆ ಎಷ್ಟು;

ಈ) ಮೃತಪಟ್ಟವರ ಕುಟುಂಬಗಳಿಗೆ ಸರ್ಕಾರ ಎಷ್ಟು ಪರಿಹಾರದ ಹಣ ನೀಡಲಾಗಿದೆ;

ಉ) ಅರಣ್ಯ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ಇಂತಹ ಹಾನಿಗಳು ಆಗುತ್ತಿರುವುದರಿಂದ ಅವರ ವಿರುದ್ಧ ಕ್ರಮ ಜರುಗಿಸಲಾಗಿದೆಯೇ?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)–

ಅ) ಹೌದು.

ಆ) ಕಾಡಾನೆಗಳನ್ನು ಓಡಿಸಲು ಅರಣ್ಯ ಸಿಬ್ಬಂದಿ/ಪೊಲೀಸರು ಮತ್ತು ಸಾರ್ವಜನಿಕರ ಸಹಾಯದಿಂದ ಅವಿರತ ಪ್ರಯತ್ನ ನಡೆಸಿ, ಆನೆಗಳನ್ನು ಅರಣ್ಯಕ್ಕೆ ಓಡಿಸುವಲ್ಲಿ ಯಶಸ್ವಿಯಾಗಿರುತ್ತದೆ. ಬೆಳೆನಾಶವಾದ ಪ್ರಕರಣಗಳಲ್ಲಿ ಸೂಕ್ತ ಪರಿಹಾರ ನೀಡಲು ಕ್ರಮ ಜರುಗಿಸಲಾಗುತ್ತಿದೆ.

ಇ) 2006–2007ನೇ ಸಾಲಿನಲ್ಲಿ ಕಾಡಾನೆಗಳ ತುಳಿತಕ್ಕೆ ಸಿಕ್ಕಿ ಸತ್ತವರ ಸಂಖ್ಯೆ ಈ ಕೆಳಕಂಡಂತಿರುತ್ತದೆ.

1. ಗೋಕಾಕ ವಿಭಾಗ, ಘಟಪ್ರಭ–1

2. ಬೆಳಗಾವಿ ವಿಭಾಗ, ಬೆಳಗಾವಿ–1 (ಒಟ್ಟು–2)

ಈ) ಮೃತಪಟ್ಟವರ ಕುಟುಂಬಕ್ಕೆ ದಿನಾಂಕ: 12.2.2002 ರ ಸರ್ಕಾರದ ಆದೇಶದ ಪ್ರಕಾರ ಪರಿಹಾರಧನ ಪ್ರತಿ ಕುಟುಂಬಕ್ಕೆ ರೂ. ಒಂದು ಲಕ್ಷದಂತೆ ರೂ.2,00,000/– (ರೂ. ಎರಡು ಲಕ್ಷ) ನೀಡಲಾಗಿದೆ.

ಉ) ಇಂತಹ ಘಟನೆಗಳು ಅರಣ್ಯ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನದಿಂದ ನಡೆಯುತ್ತಿಲ್ಲ.

172 (139) : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ವರ್ಷ ಸಾರಾಯಿ ಮಾರಾಟದಿಂದ ರಾಜ್ಯ ಸರ್ಕಾರಕ್ಕೆ ಬಂದ ಆದಾಯವೆಷ್ಟು;

ಆ) ಈ ವರ್ಷ ಸಾರಾಯಿ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ಸರಿಯಾಗಿ ರಾಜ್ಯ ಸರ್ಕಾರಕ್ಕೆ ಕಟ್ಟಿದ್ದಾರೆಯೇ; ಬಾಕಿ ಹಣ ಉಳಿದಿದೆಯೇ;

ಇ) ಬಾಕಿ ಉಳಿದ ಹಣ ಎಷ್ಟು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)–

ಅ) 2006–07ನೇ ಆರ್ಥಿಕ ವರ್ಷದಲ್ಲಿ ಸಾರಾಯಿಯಿಂದ 1906.28 ಕೋಟಿ ರೂಪಾಯಿಗಳ ಆಧಾಯವು ಬರುವ ನಿರೀಕ್ಷೆ ಹೊಂದಲಾಗಿದ್ದು ಇದುವರೆವಿಗೂ (ಡಿಸೆಂಬರ್ 2006ರ ಅಂತ್ಯಕ್ಕೆ) ಸರ್ಕಾರಕ್ಕೆ 1267.98 ಕೋಟಿ ರೂ.ಗಳ ಆದಾಯ ಸಂಗ್ರಹವಾಗಿರುತ್ತದೆ.

ಆ) 2006–07ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2006 ರಿಂದ 31.12.2006ರ ವರೆಗಿನ 9 ತಿಂಗಳ ಅವಧಿಯಲ್ಲಿ ಸಾರಾಯಿ ಬಾಡಿಗೆ ಹಣದ